ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	45 [78]
ಸದಸ್ಯರ ಹೆಸರು	ಶ್ರೀ ಪ್ರಕಾಶ್ ಕೆ. ರಾಥೋಡ್ [ನಾಮ ನಿರ್ದೇಶನ ಹೊಂದಿದವರು]
ವಿಷಯ	ವೃದ್ಧಾಪ್ಯ ವೇತನದ ಬಗ್ಗೆ.
ಉತ್ತರಿಸಬೇಕಾದ ದಿನಾಂಕ	15/2/2022
ಉತ್ತರಿಸುವ ಸಚಿವರು	ಕಂದಾಯ ಸಚಿವರು

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಸರ್ಕಾರವು 60 ರಿಂದ 64 ವರ್ಷದವರೆಗೆ ಮತ್ತು 65 ವರ್ಷ ಮೇಲ್ಪಟ್ಟವರಿಗೆ ನೀಡುತ್ತಿರುವ ವೃದ್ಧಾಪ್ಯ ವೇತನದ ಮೊತ್ತವೆಷ್ಟು :</td><td>ವೃದ್ಧಾಪ್ಯ ವೇತನ ಯೋಜನೆಯಡಿಯಲ್ಲಿ ನೀಡಲಾಗುತ್ತಿರುವ ಮಾಸಿಕ ಪಿಂಚಣಿ ಮೊತ್ತದ ವಿವರ ಕೆಳಕಂಡಂತಿದೆ.
<table>
<tr><th>ಕ್ರಮ ಸಂಖ್ಯೆ</th><th>ಯೋಜನೆ</th><th>ಪಿಂಚಣಿ ಮೊತ್ತ [ರೂ.ಗಳಲ್ಲಿ]</th></tr>
<tr><td>1</td><td>ವೃದ್ಧಾಪ್ಯ ವೇತನ [60 ರಿಂದ 64 ವರ್ಷದವರೆಗೆ]</td><td>600/-</td></tr>
<tr><td>2</td><td>ವೃದ್ಧಾಪ್ಯ ವೇತನ [65 ವರ್ಷ ಹಾಗೂ ಮೇಲ್ಪಟ್ಟವರಿಗೆ]</td><td>1200/-</td></tr>
</table></td></tr>
<tr><td>ಆ</td><td>ವೃದ್ಧಾಪ್ಯ ವೇತನ ಪಡೆಯಲು ಇರಬೇಕಾಗಿರುವ ಮಾನದಂಡಗಳೇನು [ವಿವರ ನೀಡುವುದು]</td><td>ವೃದ್ಧಾಪ್ಯ ವೇತನ ಪಡೆಯಲು ಈ ಕೆಳಕಂಡ ಮಾನದಂಡಗಳನ್ನು ನಿಗದಿಪಡಿಸಲಾಗಿದೆ :
➢ 60 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರು
➢ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಕುಟುಂಬದ ವಾರ್ಷಿಕ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು.</td></tr>
<tr><td>ಇ</td><td>ಈ ವೃದ್ಧಾಪ್ಯ ವೇತನದಿಂದ ಹಿರಿಯ ನಾಗರೀಕರಿಗೆ ಜೀವನವನ್ನು ನಡೆಸಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td rowspan="2">ಬಡತನ ರೇಖೆಗಿಂತ ಕೆಳಗಿರುವ ಹಿರಿಯ ನಾಗರೀಕರಿಗೆ ಆರ್ಥಿಕ ನೆರವು ಒದಗಿಸುವ ನಿಟ್ಟಿನಲ್ಲಿ ವೃದ್ಧಾಪ್ಯ ವೇತನ ಜಾರಿಗೊಳಿಸಲಾಗಿದ್ದು, ಇತ್ತೀಚಿನ ಆರ್ಥಿಕ ಬೆಳವಣಿಗೆ, ಬೆಲೆ ಏರಿಕೆ ಹಾಗೂ ಸೂಚ್ಯಂಕ ದರ ಪರಿಗಣಿಸಿ ಸರ್ಕಾರವು 65 ಮೇಲ್ಪಟ್ಟವರಿಗೆ ವೃದ್ಧಾಪ್ಯ ವೇತನ ಯೋಜನೆಯಡಿ ನೀಡಲಾಗುತ್ತಿದ್ದ ಪಿಂಚಣಿ ಮೊತ್ತವನ್ನು ಸರ್ಕಾರದ ಆದೇಶ ಸಂಖ್ಯೆ : ಕಂಇ 39 ಎಂಎಸ್ ಟಿ 2021, ದಿನಾಂಕ : 31/7/2021 ರನ್ವಯ ರೂ. 1000/- ರಿಂದ 1200/- ಗಳಿಗೆ ಹೆಚ್ಚಿಸಿ ಆದೇಶಿಸಿದೆ. ಈ ಪಿಂಚಣಿ ಹೆಚ್ಚಳವು ದಿನಾಂಕ : 1/8/2021 ರಿಂದ ಜಾರಿಗೆ ಬಂದಿರುತ್ತದೆ. ಇದರಿಂದ 37.98 ಲಕ್ಷ ಫಲಾನುಭವಿಗಳಿಗೆ ಅನುಕೂಲವಾಗುತ್ತಿದೆ.</td></tr>
<tr><td>ಈ</td><td>ವೃದ್ಧಾಪ್ಯ ವೇತನವನ್ನು ಹೆಚ್ಚಿಸಲು ಸರ್ಕಾರವು ಆಲೋಚಿಸಿದೆಯೇ: ಹಾಗಿದ್ದಲ್ಲಿ ಹೆಚ್ಚಿಸಲಾಗುವ ಮೊತ್ತವೆಷ್ಟು ಮತ್ತು ಅದನ್ನು ಯಾವಾಗ ಜಾರಿಗೆ ತರಲಾಗುವುದು?</td></tr>
</table>

ಸಂಖ್ಯೆ : ಡಿಎಸ್‌ಎಸ್ ಪಿ –ಎಲ್‌ಎಕ್ಯೂ 2/2022

[ಆರ್. ಅಶೋಕ]
ಕಂದಾಯ ಸಚಿವರು